ಪತ್ರಿಕಾ ಪ್ರಕಟಣೆ

ವಿಜಯಪುರ
ದಿನಾಂಕ: 08.07.2021.

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 194/2021 ಕಲಂ: 279, 283, 304(ಎ) ಐಪಿಸಿ**

ದಿನಾಂಕ 07.07.2021 ರಂದು 20.00 ಗಂಟೆಯ ನಡುವೆ ಇದರಲ್ಲಿಯ ಆರೋಪಿತನಾದ 1) ಸಂಗನಗೌಡ ಶಾಂತಗೌಡ ಪಾಟೀಲ ಸಾ: ವಿಜಯಪುರ ವಜ್ರಹನುಮಾನ ನಗರ. 2) ಲಕ್ಕಪ್ಪ ಶ್ರೀಶೈಲ ನೀಲನಕೇರಿ ಸಾ: ಮಸಳಿ. ಫಿರ್ಯಾದಿಯ ಮಗ ಸಂಗನಗೌಡ ಶಾಂತಗೌಡ ಪಾಟೀಲ ಸಾ: ವಿಜಯಪುರ ವಜ್ರಹನುಮಾನ ನಗರ ಈತನು ತಾನು ನಡೆಯಿಸುತ್ತಿದ್ದ ಮೊಟಾರ್ ಸೈಕಲ ನಂ: ಕೆ.ಎ:28 ಇಜಿ:2601 ನೇದನ್ನು ಹೊನಗನಹಳ್ಳಿ ಕಡೆಯಿಂದ ವಿಜಯಪುರ ಕಡೆಗೆ ಅತೀ ಜೊರಾಗಿ, ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬಂದು, ಚಂದ್ರಪ್ರಭಾ ಕ್ರಾಸ್ ಹತ್ತಿರ ರಸ್ತೆ ಮೇಲೆ, ಸಂಚಾರಕ್ಕೆ ಅಡೆತಡೆಯಾಗಿ ಯಾವುದೇ ಸಂಚಾರಿ ನಿಯಮ ಪಾಲಿಸದೇ ನಿಲ್ಲಿಸಿದ್ದ ಹೈವಾ ಟಿಪ್ಪರ್ ವಾಹನ ನಂ: ಕೆ.ಎ:28 ಸಿ:9914 ನೇದಕ್ಕೆ ಹಾಯಿಸಿ ಅಪಘಾತಪಡಿಸಿ, ಸ್ಥಳದಲ್ಲಿಯೇ ಮರಣ ಹೊಂದಿದ್ದು ಇರುತ್ತದೆ. ಈ ಬಗ್ಗೆ ಮುಂದಿನ ಕಾನೂನು ಕ್ರಮ ಕೈಕೊಳ್ಳಲು ನನ್ನದು ಫಿರ್ಯಾದ ಇರುತ್ತದೆ ಅಂತಾ ವಗೈರ ಫಿರ್ಯಾದದಲ್ಲಿ ನಮೂದ ಇರುತ್ತದೆ. ಈ ಬಗ್ಗೆ ಶಾಂತನಗೌಡ ಬಸನಗೌಡ ಪಾಟೀಲ ಸಾ: ವಜ್ರಹನುಮಾನ ನಗರ, ಹರಕಾರ ಲೇ ಔಟ್, ವಿಜಯಪುರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.07.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ನಿಡಗುಂದಿ ಪೊಲೀಸ ಠಾಣೆ ಗುನ್ನಾ. ನಂ: 79/2021 ಕಲಂ: 279, 304(ಎ) ಐಪಿಸಿ**

*ದಿನಾಂಕ* 07.07.2021 ರಂದು 12.00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಮಂಜುನಾಥ ಬಸಪ್ಪ ಹುಬ್ಬಳ್ಳಿ ಸಾ: ಹಣಮಸಾಗರ ತಾ: ಕುಷ್ಟಗಿ ಲಾರಿ ನಂ: ಜಿಜೆ:03 ಬಿ.ಡಬ್ಲೂ:6905 ನೇದ್ದರ ಚಾಲಕ. ಈತನು ತಾನು ನಡೆಯಿಸುತ್ತಿದ್ದ ಲಾರಿ ನಂ:ಜಿಜೆ-03/ಬಿ.ಡಬ್ಲೂ-6905 ನೇದ್ದನ್ನು ವಿಜಯಪುರ ಕಡೆಯಿಂದ ಹುನಗುಂದ ಕಡೆಗೆ ಹೋಗುವ ಎನ್.ಎಚ್-50 ರಸ್ತೆಯ ಮೇಲೆ ನಿಡಗುಂದಿಯ ಬಸ್ ನಿಲ್ದಾಣದ ಸಮೀಪ ಹೊಂಡಾ ಶೋರೂಮ ಮುಂದೆ ಬಹಳ ಜೋರಾಗಿ, ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಬಂದು ಕೋನಗಳನ್ನು ಇಟ್ಟು ಎನ್.ಎಚ್ 50 ರಸ್ತೆಯಲ್ಲಿ ಗುಂಡಿಗಳನ್ನು ದುರಸ್ತಿ ಕೆಲಸ ಮಾಡುತ್ತಿದ್ದ ಪಿರ್ಯಾದಿಯ ಅಕ್ಕ ಯಲ್ಲವ್ವ ನಿಂಗಪ್ಪ ಬಿರಾದಾರ @ ಗೌಡರ ವಯಾ-42 ವರ್ಷ ಸಾ: ರಾಮತಾಳ ಹಾ:ವ: ಮುದ್ದಾಪೂರ ಇವಳಿಗೆ ಹಾಯಿಸಿ ಅಪಘಾತ ಮಾಡಿ ಬಾರೀ ಗಾಯಪೆಟ್ಟು ಪಡಿಸಿ ಮರಣಪಡಿಸಿದ ಅಪರಾಧ. *ಈ ಬಗ್ಗೆ* ರಾಮಣ್ಣ ಗೌಡಪ್ಪ ಬಿರಾದಾರ ಸಾ॥ ಮುದ್ದಾಪುರ *ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.07,2021 ರಂದು ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.*

**3] ಮಹಿಳಾ ಪೊಲೀಸ ಠಾಣೆ ಗುನ್ನಾ. ನಂ: 80/2021 ಕಲಂ: : ಮಹಿಳೆ ಮತ್ತು ಮಗು ಕಾಣೆ**

ದಿನಾಂಕ 06.07.2021 ರಂದು 11.00 ಗಂಟೆಯಿಂದ 18.00 ಗಂಟೆಯ ನಡುವಿನ ಅವದಿಯಲ್ಲಿ ಇದರಲ್ಲಿ ಕಾಣೆಯಾದವಳು ಗೌಸಿಯಾಬೇಗಂ ಗಂ॥ ಹಜರತಇಮಾಮ ಅತ್ತಾರ, ಮತ್ತು ಮಗಳು ಅಪ್ಸಾನೂರ ತಂ॥ ಹಜರತಇಮಾಮ ಅತ್ತಾರ, ಸಾ॥ ಮನೆ ನಂ. 99 ರಾಮನಗರ ರಸ್ತೆ ಸೃಷ್ಠಿಕಾಲನಿ, ವಿಜಯಪುರ ಇವರು ಪಿರ್ಯಾದಿಯ ಮಗಳಾದ ಅಪ್ಸಾನೂರ ವಯಾ : 8 ವರ್ಷ ಇವಳನ್ನು ಕರೆದುಕೊಂಡು ಸಿಕ್ಯಾಬ ಶಾಲೆಗೆ ಹೋಗಿ ಅಡ್ಮಿಶನ್ ಮಾಡಿ ಬರುತ್ತೇನೆ ಅಂತಾ ಹೋದವಳು ವಾಪಸ್ಸ ಮನೆಗೆ ಬಾರದೆ ಎಲ್ಲಿಗೋ ಹೋಗಿ ಕಾಣೆಯಾಗಿರುತ್ತಾರೆ. ಕಾಣೆಯಾಗಿರುವ ಗೌಸಿಯಾಬೇಗಂ. ಇವರದು ಸಸದೃಡ ಮೈಕಟ್ಟು, ದುಂಡು ಮುಖ, ಗೋದಿ ಮೈಬಣ್ಣ, ಕಪ್ಪು ತಲೆಕೂದಲು, ಎತ್ತರ 5.3 ಇದ್ದು ಉರ್ದು, ಹಿಂದಿ, ಕನ್ನಡ, ಇಂಗ್ಲೀಷ, ತೆಲಗು ಭಾಷೆ ಮಾತನಾಡುತ್ತಾಳೆ. ಮನೆಯಿಂದ ಹೋಗುವಾಗ ತಿಳಿ ಹಳದಿ ಬಣ್ಣದ ಚೂಡಿದಾರ ಮತ್ತು ಕಪ್ಪು ಬಣ್ಣದ ಬುರ್ಖಾ ಧರಿಸಿಕೊಂಡು ಹೋಗಿರುತ್ತಾಳೆ. ಈ ಬಗ್ಗೆ ಹಜರತಇಮಾಮ ಅಯುಬ ಅತ್ತಾರ, ಸಾ॥ ಮನೆ ನಂ. 99 ರಾಮನಗರ ರಸ್ತೆ ಸೃಷ್ಠಿಕಾಲನಿ, ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.07,2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 193/2021 ಕಲಂ: 87 ಕೆ.ಪಿ ಆ್ಯಕ್ಟ.**

ದಿನಾಂಕ 07.07.2021 ರಂದು 17:15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಅಶೋಕ ಸೋಮನಗೌಡ ಪಾಟೀಲ 2] ವಿಜಯ ಬಾಪು ಬಿರಾದಾರ 3] ಕೀಶೂರ ಸಿದ್ದಪ್ಪ ಶಿರಶ್ಯಾಡ 4] ಪ್ರವೀಣ ಅಮೀನಪ್ಪ ಭೋವಿ 5] ಕೇಶವ ಭಾವಸಿಂಗ ಜಾಧವ ಸಾ॥ ಎಲ್ಲರೂ ವಿಜಯಪೂರ ಇವರು ಇಂಗನಾಳ ಗ್ರಾಮದ ಹತ್ತಿರ ಹಳ್ಳದ ಬಾಜು ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಮೇಲೆ ಹಣವನ್ನು ಬೆಟ್ಟ ಕಟ್ಟಿ ಅಂದರ-ಬಾಹರ ಅಂಬುವ ಇಸ್ಪೆಟ ಮನ್ನಾ ಜೂಜಾಟ ಆಡುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ:ತ: ಜಿ ಎಸ್ ಉಪ್ಪಾರ ಪಿಎಸ್ಐ ರೂರಲ್ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ದೇವರ ಹಿಪ್ಪರಗಿ ಪೊಲೀಸ ಠಾಣೆ ಗುನ್ನಾ. ನಂ: 108/2021 ಕಲಂ: 15(ಎ) 32(3) ಕೆ.ಇ ಆ್ಯಕ್ಟ.**

ದಿನಾಂಕ 06.07.2021 ರಂದು 16:30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 01] ನಿಂಗಪ್ಪ ವಿಠ್ಠಲ ಉಟಗೂರಾ, ಸಾ: ಚಿಕ್ಕ ರೂಗಿ ತಾ: ದೇವರ ಹಿಪ್ಪರಗಿ ಈತನು ತನಗೆ ಸರಕಾರದಿಂದ ಯಾವುದಾದರೂ ಲೈಸನ್ಸ್ ವ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ತನ್ನ ದಾಬಾದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಸರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟ ಅಪರಾಧ. ಈ ಬಗ್ಗೆ ಸ:ತ: ರವಿ ಯಡವನ್ನವರ, ಪಿ.ಎಸ್.ಐ ದೇವರ ಹಿಪ್ಪರಗಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.07,2021 ರಂದು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**6] ಕೂಡಗಿ ಪೊಲೀಸ ಠಾಣೆ ಗುನ್ನಾ. ನಂ: 58/2021 ಕಲಂ: 87 ಕೆ.ಪಿ ಆ್ಯಕ್ಟ.**

ದಿನಾಂಕ 06.07.2021 ರಂದು 16:40 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ದುಂಡೇಶ ಯಮನವ್ವ ಮಾದರ 2) ಪರಶುರಾಮ ಗಿರೇಪ್ಪ ಅಚನೂರ 3) ಹಣಮಂತ ಸಿದ್ದಪ್ಪ ಮಾದರ ಸಾ॥ ಬಾವೂರ 4) ಯಮನಪ್ಪ ಕರೆಪ್ಪ ಪೂಜಾರಿ 5) ಹುಸನಪ್ಪ ನಿಂಗಪ್ಪ ಮಾದರ 6) ಕಾಶಿನಾಥ ಸುಭಾಸ ಈಳಗೇರ 7) ಬಾಲಪ್ಪ ಶೇಖಪ್ಪ ಪೂಜಾರಿ 8) ಬಸವರಾಜ ಮರೇಪ್ಪ ಚಲವಾದಿ ಸಾ॥ ಎಲ್ಲರೂ ಬುದ್ನಿ ಇವರು ಗೊಳಸಂಗಿ ಕಡೆಯಿಂದ ಬುದ್ನಿ ಕಡೆಗೆ ಹೋಗುವ ಕಚ್ಚಾ ರಸ್ತೆಯ ಹತ್ತಿರ ಬುದ್ನಿ ಹಳ್ಳದ ಬಾಜು ಸಾರ್ವಜನಿಕ ಸ್ಥಳದಲ್ಲಿ ಇಸ್ಪೇಟ್ ಎಲೆಗಳ ಸಹಾಯದಿಂದ ಅಂದರ-ಬಾಹರ ಅಂಬುವ ಜೂಜಾಟ ಆಡುತ್ತಿರುವಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: 1) ರೋಖ ಹಣ 1,950 ರೂಪಾಯಿಗಳು 2) 52 ಇಸ್ಪೇಟ್ ಎಲೆಗಳು ಅ॥ಕಿ 00-00 ರೂ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 07.07,2021 ರಂದು ಕೂಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.